(ಮೈಸೂರು ಸರ್ಕಾರ)

QUESTIONS FOR ANSWERS ON THE DAY

(but not taken up)

Appeal petitions regarding Seniority of Officials of Bellary District pending in R. D.

188. Sri M. DODDANAGOUD (Sirguppa).—

Will the Minister for Revenue be pleased to state :—

(*a*) whether there are any appeal petitions of officials of Bellary District pending at Government level questioning the seniority of I Dn. Clearks in Bellary District ;

(*b*) if so, the number of applications pending and since what date ;

(*c*) the reasons for delay on the part of the Government in disposing of the appeal petitions ?

Sri H. V. KOUJALGI (Minister for Revenue).—

(*a*) Nil.

(*b*) Does not arise in view of reply to clause (*a*).

(*c*) Does not arise.

Requests to allow discussion on the Repors of the Fifth Finance Commission

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ತರಬೇಕಾಗಿದೆ. ಅದೇನೆಂದರೆ ಕೇಂದ್ರದ ಐದನೇ ಹಣಕಾಸಿನ ಆಯೋಗದವರು ಕೊಟ್ಟಿರತಕ್ಕ ಒಂದು ವರದಿಯಿಂದ ನಮ್ಮ ರಾಜ್ಯದ ಅಭಿವೃದ್ಧಿಗೆ ಬಹಳ ಧಕ್ಕೆ ಬರುವಹಾಗೆ ನಮಗೆ ಕಂಡುಬರುತ್ತಿದೆ. ಈಗಾಗಲೇ ಸುಮಾರು 50 ಜನರು ಒಂದು ಸಹಿನಂಗ್ರ ಹಣೆಮಾಡಿ ಕಾವೇರಿಜಲಾಶಯನ ಪ್ರದೇಶದಲ್ಲಿ ಕೂಡಲೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸರ್ಕಾರದವರನ್ನು ಒತ್ತಾಯಮಾಡಲು ನಿರ್ಣಯವನ್ನು ಕಳುಹಿಸುವುದರಲ್ಲಿದ್ದಾರೆ. ಅದಕ್ಕೆ ಸಾಕಷ್ಟು ಹಣವಿಲ್ಲದಿದ್ದರೆ ರಾಜ್ಯದ ಅಭಿವೃದ್ಧಿಗೆ ಬಹಳ ಕುಂದಕವುಂಟಾಗುತ್ತದೆಂಬ ಭಯ ರಾಜ್ಯದ ಪ್ರಜೆಗಳಲ್ಲಿ ಮೂಡಿರುತ್ತದೆ. ಈ ದಿವಸ ಇಂಥ ಒಂದು ಸಮಸ್ಯೆ ಐದನೆಯ ಹಣಕಾಸಿನ ಆಯೋಗದವರ ವರದಿಯಿಂದ ಉದ್ಭವವಾಗಿದೆ. ಅವರು ಇಂಥ ಒಂದು ವರದಿಯನ್ನು ಮಾಡುವುದಕ್ಕೆ ಯಾರು ಕಾರಣರು. ಯಾರು ಇದಕ್ಕೆ ಜವಾಬ್ದಾರರು ಎಂಬುದನ್ನೆಲ್ಲಾ ಈ ಮಾನ್ಯ ಸಭೆಯವರು ಜರೂರಾಗಿ ಚರ್ಚೆಮಾಡತಕದ್ದು ಅತ್ಯಗತ್ಯ. ನಮ್ಮ ರಾಜ್ಯದ ಆರ್ಥಿಕಮಟ್ಟ ಎಲ್ಲಿಗೆ ನಿಲ್ಲುತ್ತದೆ ಎಂಬುದನ್ನು ತಿಳಿಯಲು ನಮಗೆ ಬಹಳ ಆಸಕ್ತಿ ಉಂಟಾಗಿದೆ. ರಾಜ್ಯದಲ್ಲಿ ಇಂಥ ಒಂದು ಜರೂರಾದ ಪರಿಸ್ಥಿತಿಯುಂಟಾಗಿರುವುದರಿಂದ ಅಧ್ಯಕ್ಷರು ಶೀಘ್ರವಾಗಿ ತತ್ಸಂಬಂಧದಲ್ಲಿ ಒಂದು ಚರ್ಚೆಯನ್ನು ಮಾಡುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬಹುದೆಂದು ನನಗೆ ಅನಿಸುತ್ತಿರುವುದರಿಂದ ಅಧ್ಯಕ್ಷರು ಚರ್ಚೆಗೆ ಅವಕಾಶಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

V-,31 N69
N69·20-12·13